## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 04.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಆರ್ ಜಿ ಕೆ ವಕೀಲರಿಂದಃ**

**3.** ಹಿಂದಿನ ಪ್ರಕರಣದಲ್ಲಿದ್ದ ಆಸ್ತಿಗಳಲ್ಲಿ ನನ್ನ ತಾಯಿಗೆ ಯಾವುದೇ ಹಿಸ್ಸೆ ಇಲ್ಲದಿದ್ದರೂ ಸಹ ಪ್ರತಿವಾದಿಗಳು ಅವರಿಗೆ ಹಿಸ್ಸೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನ್ನ ತಾಯಿ ಆ ಸಮಯದಲ್ಲಿ ಎಲ್ಲ ಆಸ್ತಿಗಳಲ್ಲಿ ಹಿಸ್ಸೆ ಕೇಳಿದ್ದರು ಆದರೆ ಅವರು ಒಂದೇ ಆಸ್ತಿಯಲ್ಲಿ ಹಿಸ್ಸೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಬೇರೆ ಆಸ್ತಿಗಳಲ್ಲಿ ಹಿಸ್ಸೆ ಕೊಟ್ಟಿಲ್ಲ ಎಂದು ನಿಮ್ಮ ತಾಯಿ ಯಾವುದೇ ದಾವೆ ಮಾಡಿಲ್ಲ ಎಂದರೆ ಸಾಕ್ಷಿ ಅವರು ಕೊಡುತ್ತೇನೆ ಎಂದು ಹೇಳಿದ್ದರು ಆದರೆ ಕೊಡಲಿಲ್ಲದ ಕಾರಣ ಪ್ರಸ್ತುತ ದಾವೆ ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ತಾಯಿಗೆ ಆಸ್ತಿಗಳಲ್ಲಿ ಯಾವುದೇ ಹಿಸ್ಸೆ ಇಲ್ಲದಿದ್ದರೂ ಸಹ ರಾಜೀ ಡಿಕ್ರಿಯ ಪ್ರಕಾರ ಅವರು ಹಿಸ್ಸೆ ನೀಡಿ ಎಲ್ಲವನ್ನು ಮುಗಿಸಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನ್ನ ತಾಯಿಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.176 ಆಸ್ತಿ ಪ್ರತಿವಾದಿಯರಿಗೆ ಹೇಗೆ ಬಂತು ಎಂದು ಗೊತ್ತಿಲ್ಲ ಆದರೆ ನನ್ನ ಅಜ್ಜ ಇರುವಾಗಲೇ ಸದರಿ ಆಸ್ತಿಯನ್ನು ಖರೀದಿಸಲಾಗಿದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಯಾರ ಹೆಸರಿನಲ್ಲಿ ಹಾಗೂ ಯಾವಾಗ ಖರೀದಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.1 ರಿಂದ 3 ಸರ್ವೆ ನಂ.176 ಆಸ್ತಿಯನ್ನು ಸ್ವಂತ ಹಣದಿಂದ ಹಾಗೂ ಅವರು ಸ್ವಂತ ಗಳಿಸಿದ ಆಸ್ತಿಯನ್ನು ಮಾರಾಟ ಮಾಡಿ ಬಂದ ಹಣದಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ.197/ಸಿ ರಲ್ಲಿ ಅದ ಕೆಲವೊಂದು ಪ್ಲಾಟ್ ಗಳನ್ನು ಮಾರಾಟ ಮಾಡಲು ಒಪ್ಪಿಕೊಂಡು ಅದರಲ್ಲಿ ಕೆಲವೊಂದು ಪ್ಲಾಟ್ ಗಳನ್ನು ಮಾರಾಟ ಮಾಡಿ ತಮ್ಮ ಹೆಸರಿನಲ್ಲಿ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜನಿಗೆ ಉತ್ಪನ್ನ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರಪಡಿಸಿಲ್ಲ. 1992-93 ರಿಂದ ಪ್ರತಿವಾದಿ ನಂ.1 ರಿಂದ 3 ಆಸ್ತಿಗಳನ್ನು ಹಂಚಿಕೊಂಡು ಬೇರೆ ಬೇರೆಯಾಗಿ ವಾಸವಿದ್ದಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.1 ರಿಂದ 3 ಇವರು ಖರೀದಿಸಿದ ಆಸ್ತಿಗಳಲ್ಲಿ ನನ್ನ ತಾಯಿಗೆ ಹಕ್ಕು ಇಲ್ಲ ಎಂದರೆ ಸಾಕ್ಷಿ ನಾನು ಅವರ ಆಸ್ತಿಯಲ್ಲಿ ಹಿಸ್ಸೆ ಕೇಳುತ್ತಿಲ್ಲ ಆದರೆ ನನ್ನ ಅಜ್ಜನ ಆಸ್ತಿಯಲ್ಲಿ ಹಿಸ್ಸೆ ಕೇಳುತ್ತಿದ್ದೇನೆ ಎಂದು ನುಡಿಯುತ್ತಾರೆ.

4. ಸರ್ವೆ ನಂ.201/ಎ ಹಾಗೂ 201/ಸಿ ರ ಕ್ಷೇತ್ರ ಎಷ್ಟು ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳು ಯಾರ ಹೆಸನರಿಲ್ಲಿವೆ ಎಂದು ಗೊತ್ತಿಲ್ಲ. ಪ್ರತಿವಾದಿ ನಂ.1 ರಿಂದ 3 ಸದರಿ ಆಸ್ತಿಗಳನ್ನು ತಮ್ಮ ಆಸ್ತಿಗಳಿಂದ ಬಂದ ಉತ್ಪನ್ನದಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಅವರು 1989 ರಲ್ಲಿ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಅದರ ಮುಂಚೆಯೇ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾಯಿಗೆ ರಾಜೀ ಡಿಕ್ರಿಯ ಪ್ರಕಾರ ಬಂದ ಆಸ್ತಿಯನ್ನು ಪ್ರಸ್ತುತ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸರ್ವೆ ನಂ.97 ರಲ್ಲಿ ಪ್ಲಾಟ್ ನಂ.47 ರಿಂದ 52 ಗಳು 1969 ರಲ್ಲಿ ಬಿನ್ ಶೇತ್ಕಿಯಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ಲಾಟ್ ನಂ.47 ರಿಂದ 52 ಗಳು ಒಬ್ಬ ವೆಂಕನಗೌಡ ಎಂಬುವವರಿಗೆ ಸೇರಿದ್ದವು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.197 ಹಾಗೂ ಪ್ಲಾಟ್ ನಂ.47 ರಿಂದ 52 ಗಳು ಇವುಗಳನ್ನು ವೆಂಕನಗೌಡ ಹಾಗೂ ಪ್ರತಿವಾದಿ ನಂ.1 ರಿಂದ 3 ತಮ್ಮಲ್ಲಿ ಅದಲು ಬದಲು(exchange) ಮಾಡಿಕೊಂಡರು ಎಂದರೆ ನನಗೆ ಗೊತ್ತಿಲ್ಲ.

5. ವಿಪಿಸಿ ನಂ.122 ಪ್ರತಿವಾದಿ ನಂ.1 ರಿಂದ 3 ಇವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸರ್ವೆ ನಂ.200/1 ಡಿ ಆಸ್ತಿಯ ಮೇಲೆ ನಿಮ್ಮ ಅಜ್ಜಿ ಪಿ ಎಲ್ ಡಿ ಬ್ಯಾಂಕಿನಲ್ಲಿ ಸಾಲ ಮಾಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಬ್ಯಾಂಕಿನವರು ಹರಾಜು ಮಾಡಲು ಬಂದಾಗ ಪ್ರತಿವಾದಿ ನಂ.1 ರಿಂದ 3 ಸದರಿ ಆಸ್ತಿಯ ಮೇಲೆ ಇದ್ದ ಸಾಲವನ್ನು ತುಂಬಿ ಹರಾಜಿನಿಂದ ಆಸ್ತಿಯನ್ನು ಮುಕ್ತಗೊಳಿಸಿಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರ ಮನೆತನದಲ್ಲಿ 1992 ರಲ್ಲಿಯೇ ಪಾಲು ವಿಭಾಗ ಆಗಿ ಹೋಗಿದೆ ಹಾಗೂ ಸದರಿ ವಿಷಯ ನನ್ನ ತಾಯಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನನ್ನ ತಾಯಿ ರಾಜೀ ಡಿಕ್ರಿ ಪ್ರಕಾರ 1988 ರಲ್ಲಿಯೇ ಹಿಸ್ಸೆ ತೆಗೆದುಕೊಂಡು ಹೋದ ಕಾರಣ ಪ್ರಸ್ತುತ ದಾವಾ ಆಸ್ತಿಯಲ್ಲಿ ಅವರಿಗೆ ಯಾವುದೇ ಹಿಸ್ಸೆ ಇಲ್ಲ ಎಂದರೆ ಸರಿಯಲ್ಲ. 1988 ರಲ್ಲಿಯೇ ಪಾಲು ವಿಭಾಗ ಆದ ಕಾರಣ ಏಕತ್ರ ಘರಾಣೆ ಉಳಿದುಕೊಂಡಿಲ್ಲ ಎಂದರೆ ಸಾಕ್ಷಿ ನನ್ನ ತಾಯಿಗೆ ಒಂದು ಆಸ್ತಿಯಲ್ಲಿ ಮಾತ್ರ ಅವರು ಪಾಲು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.1 ರಿಂದ 3 ಪ್ರತ್ಯೇಕವಾಗಿ ವಾಸವಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ತಮ್ಮ ಹಿಸ್ಸೆಗೆ ಬಂದ ಆಸ್ತಿಗಳನ್ನು ಪ್ರತ್ಯೇಕವಾಗಿ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ನನಗೆ ಅಥವಾ ನನ್ನ ತಾಯಿಗೆ ಯಾವುದೇ ಹಿಸ್ಸೆ ಇಲ್ಲ ಆದರೂ ಸಹ ನಾನು ಈಗ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಈಗಾಗಲೇ ಪ್ರತಿವಾದಿ ನಂ.1 ಪರ ವಕೀಲರು ಪಿಡಬ್ಲ್ಯೂ.1 ಇವರಿಗೆ ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ವಿನಂತಿಸಿದ್ದು ಅನುಮತಿಸಲಾಯಿತು).**

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**